# 2 ನೇ ಹೆಚ್ಚುವರಿ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಗೋಕಾಕ.

ಸಿ.ಸಿ. ನಂ.2109/2013
ಸಿಡಬ್ಲ್ಯೂ.10 ಪಿಡಬ್ಲ್ಯೂ.7

| | | |
|---|---|---|
| ಸಾಕ್ಷಿಯ ಹೆಸರು | - | ಲಕ್ಕಪ್ಪಾ ರಾಮಪ್ಪಾ ಮಸಗುಪ್ಪಿ |
| ವಯಸ್ಸು | - | 41 ವರ್ಷ |
| ಉದ್ಯೋಗ | - | ಪಿ.ಐ ಲೋಕಾಯುಕ್ತ ದಳ ಧಾರವಾಡ |
| ವಾಸ | - | ಧಾರವಾಡ |

ದಿನಾಂಕಃ 01-8-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದಃ

ನಾನು 19-11-2011 ರಿಂದ 6-4-2013 ರವರೆಗೆ ಗೋಕಾಕ ಗ್ರಾಮೀಣ ಠಾಣೆಯಲ್ಲಿ ಪಿಎಸಐ ಅಂತಾ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 21-2-2013 ರಂದು ಬೆಳಿಗ್ಗೆ 9-30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಬಂದು ಟೈಪ ಮಾಡಿದ ದೂರನ್ನು ನೀಡಿದ್ದು ಸದರಿ ದೂರನ್ನು ಸ್ವಿಕರಿಸಿಕೊಂಡು ಗೋಕಾಕ ಗ್ರಾಮೀಣ ಠಾಣೆ ಕ್ರಮ ಸಂಖ್ಯೆ 33/2013 ರಂತೆ ಕಲಂ 143,147,324,324,504,506 ಸಹಕಲಂ 149 ಐಪಿಸಿ ರಡಿ ನೊಂದಾಯಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮೂಲ ಪ್ರತಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಿಬ್ಬಂದಿ ಮುಖಾಂತರ ಕಳುಹಿಸಿರುತ್ತೆನೆ ಹಾಗು ಗಾಯಾಳು ದೂರುದಾರನ್ನು ಉಪಚಾರಕ್ಕಾಗಿ ಸರ್ಕಾರಿ ಆಸ್ಪತ್ರೆ ಗೋಕಾಕಕ್ಕೆ ಕಳುಹಿಸಿರುತ್ತೆನೆ. ಅದೇ ದಿನ ಬೆಳಿಗ್ಗೆ 11-10 ಕ್ಕೆ ಗುನ್ನಾ ನಡೆದ ಸ್ಥಳಕ್ಕೆ ಭೇಟಿ ಇಬ್ಬರು ಪಂಚರನ್ನು ಹಾಜರುಪಡಿಸಿಕೊಂಡು ಪಂಚರ ಸಮಕ್ಷಮದಲ್ಲಿ ಪಂಚನಾಮೆ ಮಾಡಿರುತ್ತೆನೆ. ಸದರಿ ಪಂಚನಾಮೆಯನ್ನು 11-10 ರಿಂದ 12-10 ಗಂಟೆವರೆಗೆ ಮಾಡಿ ಮುಗಿಸಿರುತ್ತೆನೆ. ಅದೇ ದಿನ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ಅದರಂತೆ ಸಾಕ್ಷಿದಾರರಾದ ಚಾಸಾ-4 ರಿಂದ 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ನಂತರ 6-4-2013 ರಂದು ನನಗೆ ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-11 ರವರಿಗೆ ವಹಿಸಿರುತ್ತೆನೆ.

ದೂರನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು , ಸಾಕ್ಷಿದಾರರ ಸಹಿಯನ್ನು ನಿಪಿ- 1(ಬಿ) ಅಂತಾ ಗುರುತಿಸಲಾಯಿತು. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು , ಸಾಕ್ಷಿದಾಯ ಸಹಿಯನ್ನು ನಿಪಿ-2(ಇ), ಪ್ರಥಮ ವರ್ತಮಾನ ವರದಿಯನ್ನು ನಿಪಿ- 5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ-

ಪಿರ್ಯಾದಿ ಕೊಡಲು ಚಾಸಾ-1 ರವರ ಜೊತೆ ಯಾರು ಬಂದಿದ್ದರು ನೆನಪಿಲ್ಲ. ನಿಪಿ-1 ನ್ನು ಯಾರು ಟೈಪು ಮಾಡಿದ್ದರೆ ಗೊತ್ತಿಲ್ಲ. ಆರೋಪಿತರು ಮತ್ತು ಪಿರ್ಯಾದಿ ನಡುವೆ ಸಿವಿಲ್ ದಾವೆ ಪಾಲಿನ ಸಲುವಾಗಿ ಓಎಸ್ ನಂ.88/2013 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಲಯ ಗೋಕಾಕದಲ್ಲಿ ಚಾಲ್ತಿಯಲ್ಲಿತ್ತು ಎಂದರೆ ಗೊತ್ತಿಲ್ಲ. ಸಿವಿಲ್ ದಾವೆಗೆ ಅನುಕೂಲವಾಗಲು ಚಾಸಾ-1 ರವರ ಮಾತು ಕೇಳಿ ಸುಳ್ಳು ಪಿರ್ಯಾದಿ ದಾಖಲಿಸಿಕೊಂಡಿದ್ದೆನೆ ಎಂದರೆ ಸರಿಯಲ್ಲ.

ಪಂಚನಾಮೆ ಮಾಡಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಚಾಸಾ-4 ರಿಂದ 8 ರವರ ಹೇಳಿಕೆ ಪಡೆದಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಗಾಯಾಳುಗಳನ್ನು ಚಿಕಿತ್ಸೆಗೆ ಕಳುಹಿಸಿದ್ದೆನೆ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಯಾವುದೇ ಗುನ್ನಾ ನಡೆದಿಲ್ಲ ಅಂತಾ ಗೊತ್ತಿದ್ದರೂ ಪಿರ್ಯಾದಿಗೆ ಅನುಕೂಲವಾಗಲು ಸುಳ್ಳು ಕಲಂಗಳನ್ನು ಅಳವಡಿಸಿದ್ದೆನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಅ.

2 ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ.